# ತ್ರಿಲೋಕ ಸಂಚಾರಿ ಸೀರೆ

■ ಸವಿತಾ ಶ್ರೀನಿವಾಸ
ಕಲೆ: ಮೋನಪ್ಪ ಎಚ್.ಎಸ್.



## ಸಂಧಾನ ವಿಫಲ, ಮುಂದುವರೆದ ಸಂಘರ್ಷ

ಅರೆ ಮಾನವರ ಗುಂಪಿನ ಎಲ್ಲರೂ ಒಟ್ಟಾಗಿ ಎದ್ದು ನಿಂತು ವಿಚಾರಣಾಧಿಕಾರಿಯ ಮಾತನ್ನು ಖಂಡಿಸತೊಡಗಿದ್ದರು.

‘ಎಲ್ಲರೂ ಒಟ್ಟಿಗೆ ಕೂಗಾಡಿದರೆ ಹೇಗೆ. ಶಾಂತರಾಗಿ. ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇವೆ...’ ಎಂದವರೇ ಹಿಂದೆ ಕುಳಿತವರಿಗೆ ಎದ್ದು ನಿಂತು ಮಾತಾಡುವಂತೆ ಕರೆ ನೀಡಿದರು.

ಅವರಲ್ಲೊಬ್ಬ, ‘ಆಫೀಸರ್’, ನಾವು ಮೂಲತಃ ಮಾನವರೆಂಬುದನ್ನು ನೀವು ಬಲ್ಲಿರಿ. ನಮ್ಮ ದೇಹದ ಊನಗಳನ್ನು ನಾವಾಗಿಯೇ ಬೇಕೆಂದು ಸೃಷ್ಟಿಸಿಕೊಂಡಿರುವುದಿಲ್ಲ ಎಂಬುದನ್ನೂ ನೀವು ಬಲ್ಲಿರಿ. ನಾವು ನ್ಯಾಯಯುತವಾಗಿ ಈ ಸಮಾಜದಲ್ಲಿ ಒಂದು ಸ್ಥಾನಮಾನ, ಅಭಿರಕ್ಷೆಯನ್ನು ಬೇಡ್ತೀವಿ. ಆದರೆ ಈಗಾಗುತ್ತಿರುವ ಬೆಳವಣಿಗೆಗಳು ನಮ್ಮನ್ನು ಹೀನಾಯ ಸ್ಥಿತಿಗೆ ತಂದೊಡ್ಡಿವೆ’.

‘ಈಗ ನಿಮ್ಮ ಬೇಡಿಕೆಯಾದರೂ ಏನು? ನಿಮ್ಮ ಸಹಚರರನ್ನು ಬಿಡುಗಡೆ ಮಾಡಬೇಕೆನ್ನುವುದಾ ಅಥವಾ ನಿಮ್ಮ ಏಳ್ಗೆಯನ್ನು ಮಾಡಬೇಕು ಎನ್ನುವುದಾ?’

ವಿಚಾರಣಾಧಿಕಾರಿಯ ತಿರಸ್ಕಾರದ ಮಾತು ಅವರನ್ನು ಭರ್ಜಿಯಂತೆ ಇರಿದಿತ್ತು.